ದಿನಾಂಕ: 04.07.2023

ಅಸಲು ದಾವೆ : 36/2019 ಪಿ.ಡಬ್ಲ್ಯೂ.1

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ : ವಾದಿ ಪರ ವಕೀಲರಾದ ಶ್ರೀಮತಿ ಹೆಚ್.ಕೆ.ಎನ್ ರವರಿಂದಃ**

ನಳಿನಾಕ್ಷಿ ಅವರು ನಮಗೆ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದು, ಅದನ್ನು ಹಾಜರು ಪಡಿಸಿದ್ದು ಅದನ್ನು ನಿಪಿ.1 ಎಂದು, ಪ್ರತಿವಾದಿ ಪ್ರತಿ ಪುಟಕ್ಕೂ ಸಹಿ ಮಾಡಿದ್ದು, ಕೊನೆಯ ಪುಟದಲ್ಲಿರುವ ಅವರ ಸಹಿಯನ್ನು ನಿಪಿ.1ಎ ಎಂದು ಗುರುತಿಸಲಾಯಿತು. ನನ್ನ ಮತ್ತು ಕುಮಾರ್ ಅವರ ಸಹಿಗಳನ್ನು ನಿಪಿ.1ಬಿ ಮತ್ತು ನಿಪಿ.1ಸಿ ಎಂದು ಗುರುತಿಸಲಾಯಿತು.

ಸಂತೋಷ್ ಮತ್ತು ಪ್ರಶಾಂತ್ ಚಂದ್ರ ಎನ್ನುವವರು ನಿಪಿ.1 ದಾಖಲೆಗೆ ಸಾಕ್ಷಿದಾರರಾಗಿ ಸಹಿಗಳನ್ನು ಮಾಡಿರುತ್ತಾರೆ. ಸದರಿ ಸಹಿಗಳನ್ನು ಗುರುತಿಸಿದ್ದು ನಿಪಿ.1ಡಿ ಮತ್ತು ನಿಪಿ .1ಇ ಎಂದು ಗುರುತಿಸಲಾಯಿತು. ಕೋದಂಡರಾಮ್ ರವರು ಸದರಿ ಪತ್ರವನ್ನು ಬರೆದಿರುತ್ತಾರೆ. ಸದರಿಯವರ ಸಹಿಯನ್ನು ನಿಪಿ.1 ಎಫ್ ಎಂದು ಗುರುತಿಸಲಾಯಿತು. ದಾವಾ ಆಸ್ತಿಗೆ ಸಂಬಂಧಪಟ್ಟ ಒಂದು ಆರ್.ಟಿ.ಸಿ ಯನ್ನು ಹಾಜರು ಮಾಡಿದ್ದು ನಿಪಿ.2 ಎಂದು, ನಾನು ಪ್ರತಿವಾದಿಗೆ ವಕೀಲರ ಮೂಲಕ ನೋಟಿಸು ಕಳುಹಿಸಿದ್ದು ಕಛೇರಿ ನಕಲನ್ನು ನಿಪಿ. 3 ಎಂದು, ಅಂಚೆ ರಶೀದಿಯನ್ನು ನಿಪಿ.4 ಎಂದು, ಸ್ವೀಕೃತಿ ಪತ್ರವನ್ನು ನಿಪಿ.5 ಎಂದು, ಪ್ರತ್ಯುತ್ತರವನ್ನು ನಿಪಿ.6 ಎಂದು, Form no.22 ಅನ್ನು ಹಾಜರು ಮಾಡಿದ್ದುನಿಪಿ.7, 14.06.2007 ಕ್ರಯ ಪತ್ರದ ಆನ್ ಲೈನ್ ದಾಖಲೆಯನ್ನು ನಿಪಿ.8 ಎಂದು , ನನ್ನ ಬ್ಯಾಂಕ್ ಪಾಸ್ ಬುಕ್ ಅನ್ನು ನಿಪಿ.9 , 2ನೇ ವಾದಿಯ ಬ್ಯಾಂಕ್ ಪಾಸ್ ಬುಕ್ ಅನ್ನು ನಿಪಿ.10 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮದ್ದೂರು.